# ಮದೀನ ಒಡಂಬಡಿಕೆ

ಕಳೆದ ನವೆಂಬರ್ 13 ರಂದು ಪ್ಯಾರಿಸ್ ನಗರದಲ್ಲಿ ಭಯೋತ್ಪಾದನೆಯ ಘೋರ ದುರಂತವೊಂದು ಸಂಭವಿಸಿ ಇತಿಹಾಸದ ಪುಟವನ್ನು ಸೇರಿಕೊಂಡಿತು. ಆ ಹೊತ್ತಿನಲ್ಲಿ ಪ್ಯಾರಿಸ್ಸಿಗರು ತೋರಿದ ಧೈರ್ಯ, ತಾಳ್ಮೆ, ಭ್ರಾತೃತ್ವ ವಿಶ್ವದ ಮನವನ್ನು ಗೆದ್ದಿತು. ಚೈತನ್ಯದ ಚಿಲುಮೆಯಾಗಿ ಸದಾ ಪುಟಿಯುವ ಪ್ಯಾರಿಸ್ ನಗರ ವಾರದಂಚಿನ ಸುಂದರ ಸಂಜೆಯನ್ನು ತನ್ನ ಎಂದಿನ ಉಮೇದಿನಲ್ಲಿ ಕಳೆಯುತ್ತಿತ್ತು. ನಗರಿಗರು ಕಲೆ, ಸಂಗೀತ, ಆಟೋಟಗಳಲ್ಲಿ ತಲ್ಲೀನರಾಗಿದ್ದರು. ಯೂರೋಪಿಯನ್ನರಿಗೆ ಫುಟ್ಬಾಲ್ ಎಂದರೆ ಪ್ರಾಣ. ಫ್ರಾನ್ಸ್ ಮತ್ತು ಇಂಗ್ಲೆಂಡ್ ದೇಶಗಳ ಸ್ನೇಹದಾಟ ಶುರುವಾಗಿತ್ತು. ವೆಂಬ್ಲೀ ಕ್ರೀಡಾಂಗಣ ಕಿಕ್ಕಿರಿದು ತುಂಬಿತ್ತು. ಅಧ್ಯಕ್ಷ ಫ್ರಾಂಕೋಯಿಸ್ ಒಲ್ಯಾಂಡ್ ಸ್ವತಃ ಆಟವನ್ನು ಸವಿಯಲು ಉಪಸ್ಥಿತರಿದ್ದರು. ಯುದ್ಧೋನ್ಮಾದಿತ ಮಹಾಮಾರಿ ಗುಂಡುಗಳನ್ನು ಉಗುಳುತ್ತಾ ಎಲ್ಲಿಂದ ಬಂದಳೋ, ಆ ಕಠೋರ ಶಬ್ದಕ್ಕೆ ಜನ ತುಸು ಬೆಚ್ಚಿಬಿದ್ದರು. ಆದರೆ ಕದಲಲಿಲ್ಲ. ಅತ್ತಿತ್ತ ಚದುರಿ ಓಡಲಿಲ್ಲ. ಒಬ್ಬರಿಗೊಬ್ಬರು ಆಸರೆಯಾಗಿ ಕೈ ಹಿಡಿದುಕೊಂಡರು, ಆಲಂಗಿಸಿಕೊಂಡರು. ಸದ್ದಡಗಿತು. ಎಲ್ಲರೂ ಒಕ್ಕೊರಲಿನಿಂದ ರಾಷ್ಟ್ರಗೀತೆಯನ್ನು ಹಾಡಿದರು. ಅದೊಂದು ಭಾವನಾತ್ಮಕ ಬೆಸೆತ. ಆಪತ್ತಿನಲ್ಲಿ ಅನಿರೀಕ್ಷಿತ ತೋರ್ಗೊಂಡ ಸಂಸ್ಕಾರವಂಥ ಸಮಷ್ಟಿ ಪ್ರಜ್ಞೆ. ಅಪರೂಪವೆನಿಸುವ ರಾಷ್ಟ್ರಾಭಿಮಾನ. ಅಂದು ರದ್ದಾಗಿದ್ದ ಸ್ನೇಹದಾಟಕ್ಕೆ ಮರುದಿನವೆ ಎಲ್ಲ ಎಂಬತ್ತು ಸಾವಿರ ಟಿಕೇಟುಗಳು ಮಾರಾಟವಾದವು, ಐಫೆಲ್ ಗೋಪುರ ಮತ್ತೆ ಎದೆಯುಬ್ಬಿಸಿ ನಿಂತಿತು. ಫ್ರಾನ್ಸ್ ಯೂರೋಪಿನಲ್ಲಿಯೇ ಹೆಚ್ಚು ಮುಸ್ಲಿಮರಿರುವ ದೇಶ. ಅವರು ವೆಂಬ್ಲಿ ಕ್ರೀಡಾಂಗಣದೊಳಗೂ ಮತ್ತು ಬಟಕ್ಲಾನ್ ಸಂಗೀತ ಸಭೆಯೊಳಗೂ ಇದ್ದರೆಂಬುದನ್ನು ಮರೆಯುವಹಾಗಿಲ್ಲ.

ಭಯೋತ್ಪಾದನೆಗೆ ಮತಾಂಧತೆ ಒಂದೇ ಕಾರಣವಲ್ಲ. ಹುಡುಕಿದರೆ ಅದರಲ್ಲಿ ರಾಜಕೀಯ ಒಳಸುಳಿಗಳು ಕಾಣಸಿಗುತ್ತವೆ. ಅದರ ಮೂಲಕ್ಕೆ ಹೊರಟರೆ ಮಧ್ಯಪ್ರಾಚ್ಯ ದೇಶಗಳಲ್ಲಿ ಯಥೇಚ್ಛವಾಗಿ ದೊರಕುವ ತೈಲನಿಕ್ಷೇಪಗಳವರೆಗೆ ಹೋಗಿ ಮುಟ್ಟಬಹುದು. ಖಿಲಾಫತ್ ಸ್ಥಾಪನೆಯೆ ತಮ್ಮ ಗುರಿ ಎಂದು ಹೇಳಿಕೊಳ್ಳುವ ಉಗ್ರವಾದಿಗಳ ಕನಸು ಒಂದು ಭ್ರಮೆಯಷ್ಟೆ. ಯಾಕೆಂದರೆ ಸುನ್ನಿ– ಶಿಯಾ ದೇಶಗಳ ನಡುವೆ ನಡೆಯುವ ಭೀಕರ ಯದ್ಧ, ಕೊಲೆಗಳು ಅದನ್ನು ಪುಷ್ಟೀಕರಿಸುವದಿಲ್ಲ. ಇಡೀ ಜಗತ್ತು ಒಂದೇ ಧರ್ಮವನ್ನು ಪಾಲಿಸಬೇಕೆಂಬುದನ್ನು ಇಸ್ಲಾಂ ಒಪ್ಪುವುದಿಲ್ಲ. ಅದಕ್ಕೆ ಪ್ರವಾದಿಗಳ ಕಾಲದಲ್ಲಿ ನಡೆದ ಮದೀನಾ ಒಡಂಬಡಿಕೆಯೆ ಸಾಕ್ಷಿ. ಅದರ ಸಾರಾಂಶ ಹೀಗಿದೆ; 1. ಎಲ್ಲಾ ಜನ ವಿಭಾಗಗಳು ಶಾಂತಿ ಮತ್ತು ಸಮಾಧಾನದಿಂದ ಜೀವನ ಸಾಗಿಸುವಂತಾಗುವುದು 2. ಪ್ರತಿಯೊಬ್ಬ ವ್ಯಕ್ತಿಗೂ ಅವನ ನಂಬಿಕೆ ಮತ್ತು ಆಚಾರಗಳ ಸ್ವಾತಂತ್ರ್ಯವಿರುವುದು 3. ಹಿಂಸೆ ಮತ್ತು ಕ್ಷೋಭೆಯ ಎಲ್ಲ ಮಾರ್ಗಗಳನ್ನು ಮುಚ್ಚುವುದು ಮತ್ತು 4. ಬಾಹ್ಯ ಶತ್ರುಗಳ ಆಕ್ರಮಣವನ್ನು ತಡೆಯುವುದು. ಅದರ ಪೂರ್ಣಪಾಠದಲ್ಲಿ ಯಹೂದಿಗಳು ಮತ್ತು ಮುಸ್ಲಿಮರು– ಗುಲಾಮರಾಗಲೀ, ಸ್ವತಂತ್ರರಾಗಲೀ ತಮ್ಮ ತಮ್ಮ ಧರ್ಮದಂತೆ ಬಾಳಲು ಸ್ವತಂತ್ರರಾಗಿರುವರು. ಆದರೆ ಯಾರು ಅನ್ಯಾಯ– ಅಕ್ರಮ ಎಸಗುವರೊ ಅವರು ತಮ್ಮನ್ನು, ತಮ್ಮ ಪರಿವಾರವನ್ನು ಹೊರತು ಇತರ ಯಾರನ್ನೂ ಸಂಕಷ್ಟದಲ್ಲಿ ಸಿಲುಕಿಸಬಾರದು (ಇದರಲ್ಲಿ ಯಹೂದಿ ಮತ್ತು ಇತರೆಲ್ಲ ಗೋತ್ರಗಳೂ ಸೇರಿವೆ) ಎಂದಿದೆ. ಇದನ್ನು ಸ್ವಲ್ಪ ವಿಸ್ತರಿಸಿ ಕ್ರೈಸ್ತ ಮತ್ತು ಇತರ ಧರ್ಮದವರೂ ಎಂದು ಸೇರಿಸಿಬಿಟ್ಟರೆ ಒಂದು ಉತ್ತಮ ಒಡಂಬಡಿಕೆಯಾಗುತ್ತದೆ. ಹೇಗಿದ್ದರೂ ಪ್ರವಾದಿವರ್ಯರ ಆಗಮನವನ್ನು ಗುರುತಿಸಿದ್ದು ಬಹೀರಾ ಎಂಬ ಕ್ರೈಸ್ತ ಸನ್ಯಾಸಿನಿಯೆ ತಾನೆ!

ಇಪ್ಪತ್ತೊಂದನೆಯ ಶತಮಾನದಲ್ಲಿ ಎಲ್ಲೆಡೆಯೂ ವ್ಯಕ್ತಿ ಸ್ವಾತಂತ್ರ್ಯವನ್ನು ಪ್ರತಿಪಾದಿಸಲಾಗುತ್ತಿದೆ. ದೇಶಗಳನ್ನು ಒತ್ತೆ ಹಿಡಿಯುವ ಮಾತು ದೂರವೇ ಉಳಿಯಿತು. ಮೊದಲನೆ ಮಹಾಯುದ್ಧದ ನಂತರ ಯೂರೋಪಿನ ಎರಡು ಶಕ್ತ ರಾಷ್ಟ್ರಗಳು ಆಫ್ರಿಕಾ ಖಂಡದ ಭೂಭಾಗವನ್ನು ಅಳತೆಮಾಡಿ ಹಂಚಿಕೊಂಡಂತೆ ಈಗ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಅವುಗಳು ತಮ್ಮ ಹಿರಿಯಣ್ಣಗಿರಿಯನ್ನು ಬಿಡಬೇಕಾಗುತ್ತದೆ. ಧರ್ಮ ಎನ್ನುವ ಅಫೀಮನ್ನು ಕುಡಿದು ರಕ್ತಪಾತದ ಹೊಳೆ ಹರಿಸುವ ಮತಿಭ್ರಷ್ಟ ತೀವ್ರವಾದಿಗಳನ್ನು ಸೋಲಿಸಬೇಕಾಗುತ್ತದೆ. ಅದಕ್ಕೆ ವಿಶ್ವಶಾಂತಿಯೆ ಮಂತ್ರ.

ಚಿಕಾಗೋದ ಜೆನ್ ಗುರು ಸುಯೆನ್ ಷಾನ್ ಸೋಯೆನ್ ಸಾ ಅವರಿಗೆ ಒಂದು ದಿನ ಶಿಷ್ಯನೊಬ್ಬ ಜೆನ್ ಎಂದರೇನು? ಎಂದು ಕೇಳುತ್ತಾನೆ. ಗುರು 'ನಿನ್ನನ್ನು ನೀನು ತಿಳಿದುಕೊಳ್ಳುವುದು' ಎಂದು ಉತ್ತರಿಸುತ್ತಾರೆ. ಅದು ಹೇಗೆ? ಶಿಷ್ಯ ಮತ್ತೆ ಪ್ರಶ್ನಿಸುತ್ತಾನೆ. ಅದಕ್ಕೆ ಗುರುವಿನ ಉತ್ತರ ಹೀಗಿದೆ; 'ಬೇಕರಿಯಲ್ಲಿ ಸೀರೊಟ್ಟಿಗಳನ್ನು (cookies) ವಿಧವಿಧ ಆಕಾರಗಳಲ್ಲಿ ಕರಿಯುತ್ತಾರೆ. ಪ್ರಾಣಿ, ಪಕ್ಷಿ, ಕಾರು, ಮನುಷ್ಯ, ವಿಮಾನ ಎಲ್ಲವೂ ರೂಪ, ಬಣ್ಣದಲ್ಲಿ ಬೇರೆಯಾಗಿ ಕಾಣುತ್ತವೆ. ಆದರೆ ಅದಕ್ಕಾಗಿ ಉಪಯೋಗಿಸುವ ಹಿಟ್ಟು ಮಾತ್ರ ಒಂದೇ ಆಗಿರುತ್ತದೆ. ರುಚಿಯೂ ಒಂದೇ ಆಗಿರುತ್ತದೆ. ಹಾಗೆಯೆ ಸೃಷ್ಟಿಯಲ್ಲಿ ಸೂರ್ಯ, ಚಂದ್ರ, ತಾರೆ, ನದಿ, ಬೆಟ್ಟ ಇತ್ಯಾದಿಯೆಲ್ಲವೂ ಬೇರೆಬೇರೆ ಆಕಾರದಲ್ಲಿವೆ ಮತ್ತು ಬೇರೆಬೇರೆ ಹೆಸರಿನಿಂದ ಕರೆಯಲ್ಪಡುತ್ತವೆ, ಆದರೆ ಮೂಲಸತ್ವ ಒಂದೇ ಆಗಿರುತ್ತದೆ'. ಶಿಷ್ಯನಿಗೆ ಕಣ್ಣು ತೆರೆಯುತ್ತದೆ. ಪ್ರಕೃತಿಯಲ್ಲಿ ಇವೆಲ್ಲವೂ ನಿಯಮಬದ್ಧವಾಗಿ ತಮ್ಮ ತಮ್ಮ ಪಥದಲ್ಲಿವೆ. ಹಾಗೆ ಮನುಷ್ಯರೂ ತಮ್ಮ ಪಥವನ್ನು ಅರಿಯಬೇಕಲ್ಲವೆ?

■ ಮೂಚಿ

## ಮಾತೇ ಮುತ್ತು

★ ಪ್ರೀತಿ ಮರದಲ್ಲಿ ಬೆಳೆಯುವುದಿಲ್ಲ ಅಥವಾ ಮಾರುಕಟ್ಟೆಯಲ್ಲಿ ಸಿಗುವುದಿಲ್ಲ. ಒಬ್ಬ ಪ್ರೀತಿಸಲ್ಪಡಬೇಕೆಂದರೆ ಯಾವುದೇ ಷರತ್ತಿಲ್ಲದೆ ಇನ್ನೊಬ್ಬರನ್ನು ಪ್ರೀತಿಸಲು ಆತನಿಗೆ ಗೊತ್ತಿರಬೇಕು.

–ಸಂತ ಕಬೀರ

★ ಅವಕಾಶಗಳು ನಿಮ್ಮ ಬಾಗಿಲು ತಟ್ಟದಿದ್ದರೆ ನೀವು ಇನ್ನೊಂದು ಬಾಗಿಲನ್ನು ಸೃಷ್ಟಿಸಿ.

–ಮಿಲ್ಟನ್ ಬರ್ಲೆ

★ ಒಬ್ಬ ಬೆಳಕಿನ ನೆರವಿನಿಂದ ಭಗವದ್ಗೀತೆ ಓದಬಹುದು, ಇನ್ನೊಬ್ಬ ಕಳ್ಳತನ ಮಾಡಬಹುದು. ಬೆಳಕಿಗೂ ಅದಕ್ಕೂ ಸಂಬಂಧವಿಲ್ಲ. ಬೆಳಕು ಕೆಟ್ಟದ್ದು ಮತ್ತು ಒಳ್ಳೆಯದು ಎರಡರ ಮೇಲೂ ಸಮನಾಗಿ ಬೀಳುತ್ತದೆ.

–ರಾಮಕೃಷ್ಣ ಪರಮಹಂಸ

★ ಪರಿಪೂರ್ಣತೆಯನ್ನು ಸಾಧಿಸಲಾಗದು. ಆದರೆ ಅದನ್ನು ಬೆನ್ನಟ್ಟಿದರೆ ಅತ್ಯುತ್ತಮವಾದುದನ್ನು ಸಾಧಿಸಬಹುದು.

–ವಿನ್ಸ್ ಲೊಂಬಾರ್ಡಿ

★ ಪ್ರೀತಿಯೇ ನನ್ನ ದೇವರು. ಅದು ಎಲ್ಲರನ್ನೂ ಮಧುರವಾಗಿ ನೋಯಿಸುತ್ತದೆ.

–ಶ್ರೀ ಅರವಿಂದರು

★ ನಿಮ್ಮೊಳಗೆ ಯಾರಿಗೂ ಹೇಳದ ಕಥೆಯೊಂದಿದೆ ಎಂದರೆ ಅದಕ್ಕಿಂತ ದೊಡ್ಡ ದುಃಖ ಇನ್ನೊಂದಿಲ್ಲ.

–ಮಾಯಾ ಆ್ಯಂಗೆಲೊ

★ ಜೀವನ ಮತ್ತು ಸಾವು ಒಂದೇ– ನದಿ ಮತ್ತು ಸಮುದ್ರದಂತೆ.

–ಖಲೀಲ್ ಗಿಬ್ರಾನ್

★ ದುಃಖ ನಿಮ್ಮ ಸ್ನೇಹಿತ. ನೀವು ಒಬ್ಬಂಟಿ ಆಗಿರುವುದರಿಂದಲೇ ದುಃಖ ಬರುತ್ತದೆ. ಅದನ್ನು ಅನುಭವಿಸಿ. ಅದು ನಿಮಗೆ ಸ್ವರ್ಗೀಯ ಏಕಾಂತಕ್ಕೆ ದಾರಿ ತೋರುತ್ತದೆ.

–ಓಶೊ ರಜನೀಶ್

★ ಜನರು ನಿಮ್ಮನ್ನು ಹೇಗೆ ನೋಡುತ್ತಾರೆ ಮತ್ತು ನಿಮ್ಮ ಬಗ್ಗೆ ಏನನ್ನು ಹೇಳುತ್ತಾರೆ ಎನ್ನುವುದನ್ನು ಬದಲಾಯಿಸಲು ಸಾಧ್ಯವಿಲ್ಲ. ಅದಕ್ಕೆ ನೀವು ನೀಡುವ ಪ್ರತಿಕ್ರಿಯೆಯನ್ನು ಬದಲಾಯಿಸಬಹುದು.

–ಮಹಾತ್ಮ ಗಾಂಧೀಜಿ

★ ಸತ್ತ ನಿನ್ನೆಗಳು ಮತ್ತು ಇನ್ನೂ ಹುಟ್ಟದ ನಾಳೆಗಳ ಬಗ್ಗೆ ಏಕೆ ಚಿಂತಿಸುತ್ತೀರಿ? ಇವತ್ತಿನ ಮಾಧುರ್ಯವನ್ನು ಅನುಭವಿಸಿ.

–ಉಮರ್ ಖಯ್ಯಾಮ್